www.ecourtsindia.com

**9 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಮೈಸೂರು**

**ಸಿ.ಸಿ. ಸಂಖ್ಯೆ ಃ 1904/2024**

**ಪಿರ್ಯಾದುದಾರರು ಃ** ದೇವರಾಜ ಸಂಚಾರಿ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿತರು ಃ 1. ವಿನಯಪ್ರಸಾದ್ ಎಂ**
ಬಿನ್ ಮಹದೇವ ಎಂ
ವಯಸ್ಸು 37 ವರ್ಷ
ವಾಸಃ ನಂಃ 4, 1 ನೇ ಕ್ರಾಸ್
ವಿನಾಯಕನಗರ, ಮೈಸೂರು .

## ಆಪಾದನೆ

**ಶ್ರೀಮತಿ. ಪ್ರತಿಭಾ ಬಿ.ಎ.ಎಲ್., ಎಲ್.ಎಲ್.ಬಿ., 9 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂಮ್.ಎಂಫ್.ಸಿ.ನ್ಯಾಯಾಲಯ, ಮೈಸೂರು ಆದ ನಾನು ಈ ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ,**

ದಿನಾಂಕಃ 29.01.2024 ರಂದು ಬೆಳಿಗ್ಗೆ ಸುಮಾರು 7.30 ಗಂಟೆ ಸಮಯದಲ್ಲಿ ಮೈಸೂರು ನಗರ, ದೇವರಾಜ ಸಂಚಾರ ಪೋಲಿಸ್ ಠಾಣಾ ಸರಹದ್ದು, ಕಾನೂನು ಸಂಘರ್ಷಕ್ಕೊಳಗಾದ ಬಾಲಕಿಯು, ಚಾಸಾ 2 ರವರು ತಮ್ಮ ಸ್ಕೂಟರ್ ನಂಃ ಕೆ ಎ 09 ಇ ಎಕ್ಸ್ 3496 ರ ಹಿಂಭಾಗ ಕೂರಿಸಿಕೊಂಡು ಕೊತ್ವಾಲ್ ರಾಮಯ್ಯ ರಸ್ತೆಯಿಂದ ಬಂದು ಎನ್ ಎಸ್ ರಸ್ತೆ ಮತ್ತು ಕೊತ್ವಾಲ್ ರಾಮಯ್ಯ ರಸ್ತೆ ಜಂಕ್ಷನ್ ನಲ್ಲಿ ಬರುತ್ತಿದ್ದಾಗ, 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಮಾರುತಿ ಓಮಿನಿ ವ್ಯಾನ್ ನಂ.ಕೆಎ 09 ಎಂ ಸಿ 2275 ನ್ನು ಎನ್ ಎಸ್ ರಸ್ತೆಯಲ್ಲಿ ಏಕಮುಖ ಸಂಚಾರ ವ್ಯವಸ್ಥೆಯ ವಿರುದ್ಧ ದಿಕ್ಕಿನಲ್ಲಿ ಅಂದರೆ ವಿನೋಭಾ ರಸ್ತೆ ಕಡೆಯಿಂದ ಧನ್ವಂತರಿ ರಸ್ತೆ ಕಡೆಗೆ ವೇಗವಾಗಿ ಮತ್ತು ನಿರ್ಲಕ್ಷ್ಯತೆಯಿಂದ ಚಾಲನೆ ಮಾಡಿಕೊಂಡು ಬಂದು ಎನ್ ಎಸ್ ರಸ್ತೆ ಮತ್ತು ಕೊತ್ವಾಲ್ ರಾಮಯ್ಯ ರಸ್ತೆ ಜಂಕ್ಷನ್ ನಲ್ಲಿ ಹೋಗುತ್ತಿದ್ದ ಸ್ಕೂಟರ್ ಗೆ ಓಮಿನಿ ವ್ಯಾನಿನ ಮುಂಭಾಗದ ಎಡಭಾಗದ ಬಾಡಿಯಿಂದ ಸ್ಕೂಟರ್ ನ ಬಲಭಾಗದ ಬಾಡಿಗೆ ಡಿಕ್ಕಿ ಮಾಡಿದ ಪರಿಣಾಮ ಅಪಘಾತವಾಗಿದ್ದು, ಆದ್ದರಿಂದ 1 ನೇ ಆರೋಪಿಯಾದ ಭಾರತೀಯ ದಂಡ ಸಂಹಿತೆ ಕಲಂ **279** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

This is a True Copy of the Court Records Online. Authenticated @ districts.ecourtsindia.com/cnr/KAMS030035862024/truecopy/order-2.pdf

ಅಲ್ಲದೆ 1 ನೇ ಆರೋಪಿಯಾದ ನೀವು ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವನ ಪ್ರಾಣಕ್ಕೆ ಹಾನಿಯುಂಟಾಗುವ ರೀತಿಯಲ್ಲಿ ಮಾರುತಿ ಓಮಿನಿ ವ್ಯಾನ್ ನಂ.ಕೆಎ 09 ಎಂ ಸಿ 2275 ನ್ನು ಡಿಕ್ಕಿ ಮಾಡಿದ ಪರಿಣಾಮ, ಸ್ಕೂಟರ್ ಸವಾರರು ಕೆಳಕ್ಕೆ ರಸ್ತೆಯ ಮೇಲೆ ಬಿದ್ದು ಹೋಗಿ ಕಾನೂನು ಸಂಘರ್ಷಕ್ಕೊಳಗಾದ ಬಾಲಕಿಗೆ ತಲೆಗೆ ಪೆಟ್ಟಾಗಿದ್ದು, ಗಂಭೀರ ಸ್ವರೂಪದ ಗಾಯವಾಗಲು ಕಾರಣರಾಗಿದ್ದು, 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 338 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಅಲ್ಲದೆ 1 ನೇ ಆರೋಪಿಯಾದ ನೀವು ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ನೀವು ಏಕಮುಖ ರಸ್ತೆಯಲ್ಲಿ ವಾಹನ ಚಾಲನೆ ಮಾಡಿದ್ದರಿಂದ ಅಪಘಾತ ಸಂಭವಿಸಿದ್ದು, ಆದ್ದರಿಂದ 1 ನೇ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 218 ಸಹವಾಚಕ ಕಲಂ 177 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಪ್ರ.1ಃ ಈ ಓದಿ ಹೇಳಿದ ಆಪಾದನೆ ಅರ್ಥವಾಯಿತೆ ?

ಉಃ ಆರೋಪಿ 1

ಪ್ರ.2ಃ ಆಪಾದನೆ ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆಯಾಗಬೇಕೆ ?

ಉಃ ಆರೋಪಿ 1

(ದಿಃ 20.07.2024 ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

ಓ ಹೇ ಕೇ ಸ ಎಂ ಒ

9 ನೇ ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ
ಮೈಸೂರು.

This is a True Copy of the Court Records Online. Authenticated @ districts.ecourtsindia.com/cnr/KAMS030035862024/truecopy/order-2.pdf